# ನಿಶೆಯ ರಂಗಿಗೆ ಪಾರ್ಟಿವೇರ್



ಸಂಜೆಯ ಪಾರ್ಟಿಗೆ ಧರಿಸಬಹುದಾದ ವಿಶೇಷ ಉಡುಗೆಯ ಬಗ್ಗೆ ಫ್ಯಾಷನ್‌ಪ್ರಿಯರು ಚಿತ್ತ ಹರಿಸಿದ್ದಾರೆ. 'ಪಾರ್ಟಿವೇರ್' ಪರಿಕಲ್ಪನೆ ಇಟ್ಟುಕೊಂಡು ಫ್ಯಾಷನ್ ವಿನ್ಯಾಸಗಾರರು ಕೂಡ ನೂತನ ಬಗೆಯ ಉಡುಪುಗಳನ್ನು ವಿನ್ಯಾಸಗೊಳಿಸಿ ಟ್ರೆಂಡ್ ಸೃಷ್ಟಿಸಿದ್ದಾರೆ.

■ ಪವಿತ್ರಾ ರಾಘವೇಂದ್ರ ಶೆಟ್ಟಿ

ಪಾರ್ಟಿ ಎಂದಾಕ್ಷಣ ಸಾಮಾನ್ಯವಾಗಿ ಎಲ್ಲರ ಕಣ್ಣುಗಳು ಅರಳುತ್ತವೆ. ಇದೊಂದು ರೀತಿ ಪಾಶ್ಚಿಮಾತ್ಯ ಸಂಸ್ಕೃತಿ. ಆದರೆ ಈಗ ಚಿಕ್ಕ ಚಿಕ್ಕ ಖುಷಿಯ ಕ್ಷಣಗಳನ್ನು ಸಂಭ್ರಮಿಸುವ ಪದ್ಧತಿ ಇಲ್ಲಿಯೂ ಬೆಳೆದು ಬಂದಿದೆ. ಆ ಸಂದರ್ಭಕ್ಕೆ ತಕ್ಕದಾದ ಡ್ರೆಸ್ ಕೋಡ್ ಕೂಡ ಹುಟ್ಟಿಕೊಂಡಿದೆ. ಯಾವ ಪಾರ್ಟಿಗೆ ಯಾವ ಉಡುಪು ಹಾಕಿಕೊಳ್ಳಬೇಕು ಎಂದು ತಿಳಿಸಿಕೊಡುವ ಫ್ಯಾಷನ್ ಎಕ್ಸ್‌ಪರ್ಟ್ ಕೂಡ ಇದ್ದಾರೆ. ಹೆಚ್ಚಾಗಿ ಪಾರ್ಟಿಗಳು ನಡೆಯುವುದು ಸಂಜೆಯಾದ ಮೇಲೆಯೇ. ನಿಶೆಯ ರಂಗಿನಲ್ಲಿ ನಡೆಯುವ ಪಾರ್ಟಿಗಳಿಗೆ ಅಷ್ಟೇ ಚೆಂದದ ಉಡುಪುಗಳನ್ನು ತೊಟ್ಟರೆ ನಿಶೆಗೂ ನಶೆ ಏರುವುದು ಗ್ಯಾರಂಟಿ!

ಮದುವೆ, ಮುಂಜಿ ಎಂದಾಕ್ಷಣ ಅದಕ್ಕೆ ಒಪ್ಪುವ ಹಾಗೆ ಸೀರೆ, ಲೆಹಂಗಾ ಧರಿಸಿಕೊಂಡು ಹೋದರೆ ಕಳೆ ಕಳೆಯಾಗಿ ಕಾಣಿಸಿಕೊಳ್ಳಬಹುದು. ಆದರೆ ಅದೇ ಉಡುಪು ಪಾರ್ಟಿಗೆ ಹೇಳಿ ಮಾಡಿಸಿದ್ದಲ್ಲ. ಆಯಾಯ ಸಭೆ, ಸಮಾರಂಭಗಳಿಗೆ ಹೊಂದುವ ಹಾಗೆ ಉಡುಪುಗಳನ್ನು ಹಾಕಿಕೊಂಡು ಹೋದರೆ ಚೆಂದ ಕಾಣಬಹುದು. ಬರ್ತ್ ಡೇ ಪಾರ್ಟಿ, ಫೇರ್‌ವೆಲ್ ಪಾರ್ಟಿ, ಆ್ಯನಿವರ್ಸರಿ, ಗೆಟ್ ಟುಗೆದರ್... ಈ ಬಗೆಯ ಸಮಾರಂಭಗಳಿಗೆ ಸೂಕ್ತವಾದ ಡ್ರೆಸ್ ಹಾಕಿಕೊಂಡರೆ ಎಲ್ಲರ ಕಣ್ಮನ ಸೆಳೆಯಬಹುದು.

ಸ್ನೇಹಿತರು, ಸಂಬಂಧಿಕರು ನಿಮ್ಮನ್ನು ಯಾವುದೋ ಪಾರ್ಟಿಗೆ ಆಹ್ವಾನಿಸಿದಾಗ ಮೊದಲಿಗೆ ತಲೆಗೆ ಬರುವುದು ಯಾವ ಡ್ರೆಸ್ ಹಾಕಿಕೊಂಡು ಹೋಗಲಿ ಎಂದು. ಎಲ್ಲರಿಗಿಂತ ನಾನು ಚೆಂದವಾಗಿ